# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೩<br>**Part – III** | ಬೆಂಗಳೂರು, ಸೋಮವಾರ ೧೭, ನವೆಂಬರ್, ೨೦೨೫ (ಕಾರ್ತಿಕ , ೨೬, ಶಕವರ್ಷ, ೧೯೪೭)<br>**BENGALURU, MONDAY 17, NOVEMBER, 2025 ( KARTHIKA , 26, SHAKAVARSHA, 1947)** | ನಂ. ೭೨೯<br>**No. 729** |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ:**ನಅಇ 293 ಎಂಎಲ್ಆರ್ 2025(e).**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ:15/11/2025.**

## ಅಧಿಸೂಚನೆ

ರಾಜ್ಯದಲ್ಲಿ ನಗರಸಭೆಯಿಂದ ಹೊಸದಾಗಿ ಮಹಾನಗರ ಪಾಲಿಕೆಯನ್ನಾಗಿ ರಚಿಸಲಾಗಿರುವ ಹಾಸನ ಮಹಾನಗರ ಪಾಲಿಕೆಯಲ್ಲಿನ ಚುನಾಯಿತ ಆಡಳಿತ ಮಂಡಳಿಯ ಅವಧಿಯು ದಿನಾಂಕ:28/10/2025 ರಂದು ಹಾಗೂ ರಾಯಚೂರು ಮಹಾನಗರ ಪಾಲಿಕೆಯಲ್ಲಿನ ಚುನಾಯಿತ ಆಡಳಿತ ಮಂಡಳಿಯ ಅವಧಿಯು ದಿನಾಂಕ:02/11/2025 ರಂದು ಮುಕ್ತಾಯಗೊಂಡಿರುತ್ತದೆ. ಆದ್ದರಿಂದ ಆಡಳಿತಾತ್ಮಕ ಹಿತದೃಷ್ಟಿಯಿಂದ ಮುಂದಿನ ಹೊಸ ಚುನಾಯಿತ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬರುವವರೆಗೂ ಕಾರ್ಯನಿರ್ವಹಣೆಗಾಗಿ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕಿರುತ್ತದೆ.

ಆದ್ದರಿಂದ, ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ನಿಯಮ–509 ರನ್ವಯ ಪ್ರದತ್ತವಾಗಿರುವ ಅಧಿಕಾರದನ್ವಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಕೆಳಗೆ ತಿಳಿಸಿರುವ ದಿನಾಂಕದಿಂದ ಅನ್ವಯವಾಗುವಂತೆ/ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಹಾಸನ ಮತ್ತು ರಾಯಚೂರು ಮಹಾನಗರ ಪಾಲಿಕೆಗಳಿಗೆ ಈ ಕೆಳಕಂಡಂತೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಆದೇಶಿಸಿದೆ:

| *ಕ್ರ. ಸಂ.* | *ಮಹಾನಗರ ಪಾಲಿಕೆ* | *ಅನ್ವಯವಾಗುವ ದಿನಾಂಕ* | *ಆಡಳಿತಾಧಿಕಾರಿಯ ವಿವರ* |
|---|---|---|---|
| 1 | ಹಾಸನ ಮಹಾನಗರ ಪಾಲಿಕೆ | 29/10/2025 | ಪ್ರಾದೇಶಿಕ ಆಯುಕ್ತರು,<br>ಮೈಸೂರು ವಿಭಾಗ, ಮೈಸೂರು |
| 2 | ರಾಯಚೂರು ಮಹಾನಗರ ಪಾಲಿಕೆ | 03/11/2025 | ಪ್ರಾದೇಶಿಕ ಆಯುಕ್ತರು,<br>ಕಲಬುರಗಿ ವಿಭಾಗ, ಕಲಬುರಗಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಎಂಎ–1&3)


ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು




THAMMAIAH


**R.N.I. No. KARBIL/2001/47147 POSTAL REGN. No. RNP/KA/BGS/2202/2017-19**
**Licensed to post without prepayment WPP No. 297**